Sri G. B. SHANKAR RAO.—The approximate cost is about seventy to eighty thousands. We are not taking up this work now. It will be taken up after the guide bund is completed.

Sri R. S. HEGDE.—In view of this wharf not being used by vessels, was there a representation from the people of Honnavar that a passenger jetty must be constructed for embarking of passengers and for unloading cargoes from the rural areas ?

Sri G. B. SHANKAR RAO.—Yes, Sir. There were reprsentations, in February last We have proposed to put a temporary jetty for the use of passenger traffic.

Sri R. S. HEGDE.—In answer (a)(ii)(iii), it is stated that the work is in progress. What was the scheduled time within which these works had to be completed ?

Sri G. B. SHANKAR RAO.—We hope that the works will be completed within the schedule time.

Sri R. S. HEGDE.—How many jetties are to be constructed in the southern bank of the port ?

Sri G. B. SHANKAR RAO.—Four jetties have been proposed on the southern bank of Sharavathi for unloading iron ore.

Sri SANJEEVANATH AIKALA.—After completion, will it be an all-weather port or fair weather port ?

Sri G. B. SHANKAR RAO.—It will be a fair weather port.

Sri R. S. HEGDE.—What is the estimated cost of a jetty ?

Sri G. B. SHANKAR RAO.—The estimated cost of the jetties is Rs. 2.3 lakhs. There were difficulties in putting up the jetties for want of shoes. Certain materials required have now been obtained. Four piles before the monsoon. Driving the remaining piles is in progress.

Levying of penal interest on the delayed loan instalments.

*Q.—125. Sri S. V. RAME GOWDA (Malur).—

Will the Government be pleased to state :—

whether they would consider the question of abolishing the present system of levying penal interest on the delayed loan instalments of different loan given to ryots and collect only ordinary interest from the ryots even for the period of delay ?

A.—Sri RAMAKRISHNA HEGDE (Minister for Finance).—

The penal interest has to be charged on the overdue instalments of loan repayments and no doubt, Government has been always considerate in waiving the levy of penal interest in hard and deserving cases particularly when interest collected is equal to principal. Government cannot think of abolishing the system of penal interest, as that will encourage default in regular repayments. Even when Government default in repayments to Centre or Life Insurance Corporation, etc., penal rate is charged.

ಶ್ರೀ ಎಸ್. ಎ. ರಾಮೇಗೌಡ.—ನನ್ನ ಪ್ರಶ್ನೆಗೆ ಉತ್ತರವಾಗಿ 'ಸಾಲವನ್ನು ಮರುಪಾವತಿ ಮಾಡುವ ಸಂಬಂಧದಲ್ಲಿ ಕಾಲಾತೀತವಾಗಿ ಬಾಕಿ ಇರುವ ಕಂತುಗಳ ಮೇಲೆ ಸುಸ್ತಿ ಬಡ್ಡಿಯನ್ನು ವಿಧಿಸಲೇಬೇಕಾಗುವುದು ಮತ್ತು ವಿಶೇಷವಾಗಿ ತೊಂದರೆಯಾಗುವ ಮತ್ತು ಅರ್ಹವೆಂದು ಕಂಡು ಬರುವ ಪ್ರಸಂಗಗಳಲ್ಲಿ ಅದರಲ್ಲೂ ಮುಖ್ಯವಾಗಿ ವಸೂಲುಮಾಡಿರುವ ಬಡ್ಡಿಯು ಅಸಲಿಗೆ ಸಮವಾಗಿರುವ ಸಂದರ್ಭಗಳಲ್ಲಿ ಸುಸ್ತಿ ಬಡ್ಡಿಯನ್ನು ಮನ್ನಾಮಾಡುವ ಬಗ್ಗೆ ಸರ್ಕಾರದವರು ಯಾವಾಗಲೂ ಸಹಾನುಭೂತಿಯುಳ್ಳವರಾಗಿದ್ದಾರೆ. ಸುಸ್ತಿ ಬಡ್ಡಿಯ ಪದ್ಧತಿಯನ್ನು ರದ್ದುಮಾಡುವುದನ್ನು ಸರ್ಕಾರದವರು ಯೋಚಿಸುವಂತಿಲ್ಲ' ಎಂದು ಹೇಳಿದ್ದಾರೆ. ಸರ್ಕಾರದವರು ರೈತರಿಗೆ ಅಷ್ಟುಮಟ್ಟಿನ ಸುಸ್ತಿ ಬಡ್ಡಿಯನ್ನು ಬಿಡದೇಹೋದರೆ ಇವರು ಇನ್ನು ಯಾವತರಹ ಸಹಾಯವನ್ನು ರೈತರಿಗೆ ಮಾಡುತ್ತಾರೆಯೋ ನನಗೆ ಗೊತ್ತಿಲ್ಲ. ಆದ್ದರಿಂದ ರೈತರುಗಳಿಗೆ ಕೊಟ್ಟಿರುವ ಸಾಲದ ಕಂತುಗಳ ಮೇಲೆ ವಿಧಿಸಲಾಗುತ್ತಿರುವ ಸುಸ್ತಿ ಬಡ್ಡಿಯನ್ನು ಸರ್ಕಾರದವರು ಮನ್ನಾ ಮಾಡಬೇಕು, ಇದಕ್ಕೆ ಸರ್ಕಾರದವರು ಏನು ಜವಾಬನ್ನು ಹೇಳುತ್ತಾರೆ ?

†ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದ ಒಂದು ಭಾಗವನ್ನು ಮಾತ್ರ ಓದಿದ್ದಾರೆಂದು ಕಾಣುತ್ತದೆ. ಆದ್ದರಿಂದ ಈ ಪ್ರಶ್ನೆಗೆ ಕೊಟ್ಟಿರತಕ್ಕ ಇನ್ನೊಂದು ಭಾಗದ ಉತ್ತರವನ್ನೂ ಮಾನ್ಯ ಸದಸ್ಯರು ಓದಿದರೆ ಅವರಿಗೆ ಅದು ಸರಿಯಾಗಿ ಅರ್ಥವಾಗುತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಎಸ್. ಎ. ರಾಮೇಗೌಡ.—ಸುಸ್ತಿ ಬಡ್ಡಿಯ ದರ ಏನು, ಮತ್ತು ಸಾಧಾರಣ ಬಡ್ಡಿ ದರ ಏನು ಎಂಬುದನ್ನು ಮಾನ್ಯ ಸಚಿವರು ಹೇಳುವುದಕ್ಕಾಗುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವುಗಳಿಗೆ ಬೇರೆ ಬೇರೆ ದರಗಳಿರುತ್ತವೆ.

ಶ್ರೀ ಜಿ. ರಾಮೇಗೌಡ.—ಸುಸ್ತಿ ಬಡ್ಡಿಯನ್ನು ಹಾಕುವಾಗ ಸಾಧಾರಣ ಬಡ್ಡಿದರದ ಮೇಲೆ 9 ಪರ್ಸೆಂಟ್ ಸೇರಿಸುತ್ತಾರೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಸಾಧಾರಣ ಬಡ್ಡಿಗಿಂತ ಹೆಚ್ಚು ಇಲ್ಲ.

ಶ್ರೀ ಜಿ. ರಾಮೇಗೌಡ.—ಸಾಧಾರಣ ಬಡ್ಡಿ 6 ಪರ್ಸೆಂಟ್ ಇದ್ದರೆ 15 ಪರ್ಸೆಂಟ್ ಸುಸ್ತಿ ಬಡ್ಡಿಯನ್ನು ವಸೂಲುಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಕೇಸಿನಲ್ಲಿ ಆರೀತಿ ಮಾಡುತ್ತಾರೆ ಎಂಬುದನ್ನು ಈಗ ನಾನು ಹೇಳಲಾರೆ. ಬೇರೆ ಬೇರೆ ರೀತಿಯ ಯೋಜನೆಗಳ ಸಾಲಗಳನ್ನು ಕೊಡುವುದಕ್ಕೆ ಅವಕಾಶ ವಿದೆ. ಅವುಗಳಿಗೆ ಸಂಬಂಧಪಟ್ಟಹಾಗೆ ಕಂಡೀಷನ್‌ಗಳನ್ನು ಹಾಕಿ ಹಣವನ್ನು ಸಾಲ ಕೊಡುತ್ತಾರೆ.

ಶ್ರೀ ಬಿ. ಬೈರಪ್ಪಾಜಿ.—ಈಗ ನಮ್ಮ ರಾಜ್ಯದಲ್ಲಿ ಅನೇಕ ಕಡೆ ಸರಿಯಾಗಿ ಮಳೆಬೆಳೆಗಳಾಗದೆ ಜನಗಳು ತುಂಬಾ ತೊಂದರೆಪಡುತ್ತಿದ್ದಾರೆ. ಇಂಥಾ ಒಂದು ಸಂದರ್ಭದಲ್ಲಿ ಸರ್ಕಾರದವರು ರೈತರುಗಳಿಗೆ ಕೊಟ್ಟಿರುವ ಸಾಲಗಳಿಗೆ ಸಂಬಂಧಪಟ್ಟ ಕಂತುಗಳನ್ನು ಕೊಡಬೇಕೆಂದು ರೆವಿನ್ಯೂ ಇಲಾಖೆಯವರು ಒತ್ತಾಯ ಮಾಡುತ್ತಿದ್ದಾರೆ. ಮತ್ತು ಸಾಲಗಳ ಸಂಬಂಧದಲ್ಲಿ ವಿಳಂಬವಾಗಿರುವ ಸಾಲದ ಕಂತುಗಳ ಮೇಲೆ ಸುಸ್ತಿ ಬಡ್ಡಿಯನ್ನು ಬೇರೆ ವಿಧಿಸಿ ರೈತರಿಗೆ ನೋಟೀಸ್‌ಗಳನ್ನು ಕೊಡುತ್ತಿದ್ದಾರೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಸಾಲಗಳ ಸಂಬಂಧದಲ್ಲಿ ವಿಳಂಬವಾಗಿರುವ ಸಾಲದ ಕಂತುಗಳ ಮೇಲೆ ವಿಧಿಸಲಾಗುತ್ತಿರುವ ಸುಸ್ತಿ ಬಡ್ಡಿಯನ್ನು ಏತಕ್ಕೆ ಕಡಿಮೆ ಮಾಡಬಾರದು ?

Sri RAMAKRISHNA HEGDE.—I am sorry we are not in a position to do away with this provision completely. As I have already stated, wherever there are deserving or hard cases, Government is always sympathetic. I may also inform the Honourable member that if there is any overdue of the loan borrowed by the State Government, the Government has to pay penal interest.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ಈಗ ಗ್ರಾಮಾಂತರ ಪ್ರದೇಶದಲ್ಲಿ ಮುಖ್ಯವಾಗಿ ಸರ್ಕಾರದವರು ರೈತರಿಗೆ ಸಾಲವನ್ನು ಕೊಡುವುದರಲ್ಲಿ ಅಡಮಾನ ಬ್ಯಾಂಕುಗಳ ಮುಖಾಂತರ ಸಾಲಗಳನ್ನು ಕೊಡುತ್ತಾರೆ, ನ್ಯಾಷನಲ್ ಎಕ್ಸ್‌ಟೆನ ಷನ್ ಯೋಜನೆಯ ಸಂಬಂಧದಲ್ಲಿ ತಾಲ್ಲೂಕು ಬೋರ್ಡಿನವರು ಕೆಲವು ಸಾಲಗಳನ್ನು ಕೊಡುತ್ತಾರೆ. ಜಮೀನು ಅಬಾದು ಮಾಡಲು ಸಾಲವನ್ನು ಕೊಡುತ್ತಾರೆ; ತಕಾವಿ ಸಾಲಗಳನ್ನು ಕೊಡುತ್ತಾರೆ. ಈ ರೀತಿಯಾಗಿ ಸರ್ಕಾರದವರು ರೈತರಿಗೆ ಸಾಲವನ್ನು ಮಂಜೂರು ಮಾಡಿ ಅದನ್ನು ಅವರಿಗೆ ಪಾವತಿ ಮಾಡಿದ ಮೇಲೆ ಅದರ ವಸೂಲಾತಿಯ ಬಗ್ಗೆ ತಾಲ್ಲೂಕು ಆಫೀಸಿನವರು ಕ್ರಮವಹಿಸುವುದನ್ನು ತೆಗೆದುಕೊಳ್ಳುತ್ತಾರೆ. ಆ ರೀತಿಯಾಗಿ ಸರ್ಕಾರದವರಿಂದ ಸಾಲವನ್ನು ತೆಗೆದುಕೊಂಡಂಥ ರೈತರುಗಳು ಸಾಲವನ್ನು ಮರುಪಾವತಿ ಮಾಡುವ ಸಂಬಂಧದಲ್ಲಿ

(ಶ್ರೀ ಬಿ. ಬೈರಪ್ಪಾಜಿ)

ಕಾಲಾತೀತವಾಗಿ ಬಾಕಿ ನಿಂತಿರುವ ಕಂತುಗಳ ಮೇಲೆ ನುಸ್ತಿ ಬಡ್ಡಿಯನ್ನು ಹಾಕುತ್ತಾರೆ. ಯಾವ ಅಧಿಕಾರಿಗಳು ರೈತರಿಗೆ ಸಾಲವನ್ನು ಮಂಜೂರು ಮಾಡಿ ಅದನ್ನು ರೈತನಿಗೆ ಪಾವತಿ ಮಾಡುತ್ತಾರೆಯೋ ಅವರು ಅದರ ವಸೂಲಾತಿಯ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಹೀಗಿರುವಾಗ ರೈತರಿಗೆ ಯಾವ ವಿಧದಲ್ಲಿಯೂ ಸಂಬಂಧ ಇಲ್ಲದೆ ಇರತಕ್ಕ ಅಧಿಕಾರಿಗಳು ಆ ಸಾಲದ ವಸೂಲಾತಿಯ ಬಗ್ಗೆ ರೈತರಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ಇಂಥಾ ಸಂದರ್ಭಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಅಂಥಾ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೀರಾ, ಮತ್ತು ರೈತನಿಗೆ ವಿಧಿಸಿರತಕ್ಕ ನುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ರೈತ ಸಾಲ ತೆಗೆದುಕೊಳ್ಳುವಾಗ ವರ್ಷಕ್ಕೆ ಎಷ್ಟು ಕೊಡಬೇಕು, ಯಾವ ರೇಟ್ ಪ್ರಕಾರ ಕೊಡಬೇಕು ಮತ್ತು ಎಷ್ಟು ಕಂತಿನ ಪ್ರಕಾರ ಸರ್ಕಾರಕ್ಕೆ ಜಮಾ ಮಾಡ ಬಹುದು ಎಂಬುದನ್ನೆಲ್ಲಾ ಯೋಚನೆ ಮಾಡಿಯೇ ತೆಗೆದುಕೊಂಡಿರುತ್ತಾನೆ. ಆದ್ದರಿಂದ ನುಸ್ತಿ ಬಡ್ಡಿ ಕೊಡಬೇಕಾದ ಸಂದರ್ಭ ಬರುವುದಿಲ್ಲ.

Siddapura Project.

*Q.—138. Sri MAHANTA SWAMY (Shahapur).—

Will the Government be pleased to state :—

(*a*) when the Siddapura Project work would be started ;
(*b*) the estimated cost of the same ;
(*c*) the number of acres that would be irrigated under this project;
(*d*) the number of villages that would come under submersion ?

A.—Sri S. NIJALINGAPPA (Chief Minister).—

(*a*) As soon as the Planning Commission approves the revised proposal.
(*b*) Rs. 48.3 crores.
(*c*) 6,50,000 acres.
(*d*) 59.

ಶ್ರೀ ಮಹಾಂತಸ್ವಾಮಿ.—ಯೋಜನಾ ಆಯೋಗದವರು ಮಾರ್ಪಾಟಾದ ಯೋಜನೆಯನ್ನು ಅನುಮೋದಿಸಿದ ಕೂಡಲೇ ಪ್ರಾರಂಭಿಸುತ್ತೀವೆ ಎಂದು ಹೇಳುತ್ತಾ ಇದ್ದೀರಿ. ಇದಕ್ಕೆ ಏನಾದರೂ ಅಡ್ಡಿ ಆತಂಕ ಇದೆಯೇ ಅಥವಾ ಇದರಲ್ಲಿ ಏನಾದರೂ ರಾಜಕೀಯ ಇದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇದರಲ್ಲಿ ರಾಜಕೀಯದ ಗಂಧ ಎಳ್ಳಷ್ಟೂ ಇಲ್ಲ. ತಜ್ಞರು ವಿಚಾರ ಮಾಡಿ ತಿಳಿಸಬೇಕಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ನಾರಾಯಣಪುರದಲ್ಲಿ ಈ ಪ್ರಾಜೆಕ್ಟನ್ನು ಶುರು ಮಾಡುವಾಗ ಪ್ಲಾನಿಂಗ್ ಕಮಿಷನ್‌ನವರು ಮಂಜೂರಾತಿ ಕೊಟ್ಟಿದ್ದರೆ ? ಹಂಗಿದ್ದ ಪಕ್ಷದಲ್ಲಿ ಈಗ ಬದಲಾವಣೆ ಮಾಡುವುದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಅಲ್ಲಿಗೆ ಬಂದು ಪೊಕ್ಕಾ ನೋಡಿದ ಮೇಲೆ ಸಂಬಂಧಪಟ್ಟ ಮಂತ್ರಿಗಳು ದೊಡ್ಡ ಇಂಜನಿಯರು ಅವರು ಈಗ ಮಾಡಿರುವುದು ಸರಿ ಎಂದು ಹೇಳಿ ಸಿದ್ದಾಪುರದಲ್ಲಿ ಪ್ರಾಜೆಕ್ಟ್ ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಅದನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಪ್ಲಾನಿಂಗ್ ಕಮಿಷನ್‌ನವರು ನಾರಾಯಣಪುರದಲ್ಲಿ ಪ್ರಾಜೆಕ್ಟ್ ಆಗಬೇಕೆಂದು ಮಂಜೂರಾತಿ ಕೊಟ್ಟಿದ್ದರೇ ಹೇಗೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಆಗಬಹುದು ಎಂದು ಅಭಿಪ್ರಾಯಪಟ್ಟಿದ್ದರು ಅದರಂತೆ ಕೆಲಸ ನಡೆಯಬೇಕೆಂದು ಇತ್ತು. ಆದರೆ ಅವರು ಪೊಕ್ಕಾ ಬಂದು ನೋಡಿದಮೇಲೆ 6 ಕೋಟಿ ರೂಪಾಯಿ ಉಳಿತಾಯವಾಗುತ್ತದೆ ಮತ್ತು ಅಷ್ಟೇ ಜಮೀನು ನಾಗುವಳಿಯಾಗುತ್ತದೆ ಎಂದು ಹೇಳಿದ್ದರ ಮೇಲೆ ಅದನ್ನು ಬದಲಾಯಿಸಿದ್ದಾರೆ.